# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 506/22

ಪಿ.ಡಬ್ಲ್ಯು 2

| | | |
|---|---|---|
| ಸಾಕ್ಷಿದಾರರ ಹೆಸರು | – | ಕೃಷ್ಣಾನಂದ ಕೊಳವೆಕರ್ |
| ತಂದೆಯ ಹೆಸರು | – | ರಾಮದಾಸ ಕೊಳವೇಕರ |
| ವಯಸ್ಸು | – | 66 ವರ್ಷ |
| ಉದ್ಯೋಗ | – | ರಿಯಲ್ ಎಸ್ಟೆಟ್ ಬಿಸನೆಸ್ |
| ವಾಸ್ತವ್ಯ | – | ಕೆಂಚಾ ರಸ್ತೆ, ಕಾರವಾರ |

(ಇಂದು ದಿನಾಂಕಃ 03-06-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಫಿರ್ಯಾದಿ ಪರ ಶ್ರೀ ಡಿ.ವಿ.ಜಿ. ವಕೀಲರಿಂದ**

ನಾನು ಸುಮಾರು 20 ವರ್ಷಗಳಿಂದ ಫಿರ್ಯಾದಿಯ ಪರಿಚಯ ಹಾಗೂ ಗೆಳೆತನ ಇತ್ತು ಹಾಗೂ ಅವರು ಒಳ್ಳೆಯ ವೈದ್ಯರು. ಕಾರವಾರ ಸಿವಿಲ್ ಆಸ್ಪತ್ರೆಯಲ್ಲಿ ಸರ್ಜನ್ ಆಗಿ ಕೆಲಸ ಮಾಡುತ್ತಾರೆ. ಕಷ್ಟ ಕಾಲದಲ್ಲಿ ಜನವರಿಗೆ ಒಳ್ಳೆಯ ಸೇವೆಯನ್ನು ಕೊಡುತ್ತಿದ್ದಾರೆ. ಅದಕ್ಕಾಗಿ ನಾನು ನನ್ನ ಪರಿಚಯದವರು ಕಷ್ಟಕಾಲದಲ್ಲಿ ಇದ್ದರೆ ಅವರಿಗೆ ನಾನು ಫಿರ್ಯಾದಿಯ ಬಳಿ ಕಳುಹಿಸಿದರೆ ಅವರು ಒಳ್ಳೆಯ ಉಪಚಾರ ನೀಡುತ್ತಿದ್ದರು.

ದಿನಾಂಕಃ 26-05-2021 ರಂದು ವಾಟ್ಸಪ್‌ನಲ್ಲಿ ವಿಡಿಯೋ ಬಂದಿದ್ದು, ಅದರಲ್ಲಿ ರಾಘು ನಾಯ್ಕ ಇವರು ಅರ್ಚನಾ ಮತ್ತು ಸುರೇಖಾ ಇವರಿಗೆ ಸಂಬಳ ಕೊಟ್ಟಿಲ್ಲ ಎಂದು ವಿಡಿಯೋ ಮೂಲಕ ಭ್ರಷ್ಟ ಅಧಿಕಾರಿ ಎಂದು ಹೇಳಿ ವಿಡಿಯೋದಲ್ಲಿ ಬಂದಿತ್ತು. ಅದನ್ನು ನೋಡಿ ನನಗೆ ಬಹಳ ಬೇಜಾರಾಯಿತು. ಅವರ ಮನೆ ಪಕ್ಕಕ್ಕೆ ನನ್ನ ಕಮರ್ಶಿಯಲ್ ಕಾಂಪ್ಲೆಕ್ಸ್ ಇದ್ದು, ಅಲ್ಲಿ ನಾನು ದೇಖರೇಖೆಗೆ ಬಂದಿದ್ದೆನು. ಅಲ್ಲಿ ಫಿರ್ಯಾದಿ ಕೈ ಸನ್ನೆ ಮಾಡಿ ನನ್ನನ್ನು ಕರೆದರು. ಆಗ ನಾನು ಅವರಿಗೆ ಅವರ ವಿಡಿಯೋ ಬಂದ ಬಗ್ಗೆ ತಿಳಿಸಿದೆನು. ಅದಕ್ಕೆ ಅವರು ಸಮಜಾಯಸಿ ನೀಡಲು ಪ್ರಯತ್ನ ಮಾಡಿದರು. ಆದರೆ ಅವರಿಗೆ

ಮತ್ತು ನನಗೆ ಅವರ ಮೇಲೆ ನನಗೆ ಹಿಂದೆ ಇದ್ದ ಗೌರವ ಹಾಗೂ ವಿಶ್ವಾಸ ಇಲ್ಲದಂತಾಯಿತು. ಈ ಬಗ್ಗೆ ನಾನು ಏನು ಮಾತನಾಡದೇ ಅಲ್ಲಿಂದ ವಾಪಸ್ ಬಂದಿರುತ್ತೇನೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ